ಪುಟ್ಟ: ಅಪ್ಪಾ... ಅಪ್ಪಾ... ಆದಷ್ಟು ಬೇಗ ನನ್ನ ಮದುವೆ ಮಾಡಿಸಿ
ಅಪ್ಪ: ಯಾಕೋ ಪುಟ್ಟ ನಿನಗೆ ಇಷ್ಟೊಂದು ಅರ್ಜೆಂಟು ?
ಪುಟ್ಟ: ಮೊದಲು ನೀವು ಮಾಡಿಸಿ ಅಪ್ಪಾ... ಇಲ್ಲವಾದರೆ ನಾನೇ ಅಜ್ಜಿ ಜೊತೆ ಮದುವೆ ಮಾಡಿಕೊಳ್ಳುತ್ತೇನೆ
ಅಪ್ಪ: ಏನೋ... ನೀನು ನನ್ನ ಅಮ್ಮನನ್ನೇ ಮದುವೆ ಆಗುತ್ತಿಯಾ?
ಪುಟ್ಟ: ಹೌದು ಮತ್ತೆ. ನೀವೂ ನನ್ನ ಅಮ್ಮನ ಜೊತೆ ಮದುವೆ ಆಗಿಲ್ಲವೆ. ಹಾಗೆ ನಾನೂ ನಿಮ್ಮ ಅಮ್ಮನ ಜೊತೆ ಮದುವೆ ಆಗುವೆ. ಅದರಲ್ಲಿ ಏನ್ ತಪ್ಪಿದೆ !




ಗೆಳೆಯ: ಪ್ರತಿ ಅಮ್ಮನೂ ತನ್ನ ಮಗನಿಗೆ ಎಲ್ಲವನ್ನೂ ಕಲಿಸಿಕೊಡುತ್ತಾಳೆ. ಆದರೆ, ಅವಳಿಲ್ಲದೆ ಹೇಗಿರುವುದೆಂದು ಕಲಿಸಿಕೊಡುವುದಿಲ್ಲ. ಏಕೆ ಗೊತ್ತೇ?
ಗುಂಡ: ಪತ್ನಿ ಬಂದ ಮೇಲೂ ಮಗ ಅವಳನ್ನು ಮರೆಯಬಾರದಲ್ಲ ಅದಕ್ಕೆ.

★★★

ಸಂತಾ: ನಿನ್ನೆ ನಾನು ನಾಲ್ಕು ಪೆಗ್ ಕುಡಿದ ಮೇಲೂ ಜವಾಬ್ದಾರಿಯುತವಾಗಿ ವರ್ತಿಸಿದೆ ಕಣೋ. ನನ್ನ ಕಾರು ನಾನೇ ಡ್ರೈವ್ ಮಾಡುವ ಸ್ಥಿತಿಯಲ್ಲಿದ್ದರೂ ಟ್ಯಾಕ್ಸಿ ತರಿಸಿ ಮನೆಗೆ ಹೋದೆ.
ಬಂತಾ: ಹೇ, ನಿನ್ನೆ ಪಾರ್ಟಿ ಇದ್ದದ್ದು ನಿನ್ನ ಮನೆಯಲ್ಲೇ ಕಣಯ್ಯ !

★★★

ಗುಂಡನ ಪತ್ನಿ: (ಮೆಡಿಕಲ್ ಶಾಪ್‌ನಲ್ಲಿ ಔಷಧಿ ಖರೀದಿಸಿದ ಬಳಿಕ ಕೇಳಿದರು) ಸಕ್ಕರೆ ಕೂಡಾ ಕೊಡಿ
ಸಿಬ್ಬಂದಿ: ಇದು ಮೆಡಿಕಲ್ ಶಾಪ್. ಸಕ್ಕರೆ ಇಲ್ಲಿ ಸಿಗಲ್ಲ. ಔಷಧಿ ಮಾತ್ರ ಸಿಗುತ್ತದೆ
ಗುಂಡನ ಪತ್ನಿ: ಏನಪ್ಪಾ, ನಾವೂ ಓದು ಬರಹ ಬಲ್ಲವರು ಗೊತ್ತಾ? ಔಷಧಿಯ ಪ್ಯಾಕೆಟ್ ಮೇಲೆ 'ಶುಗರ್ ಫ್ರೀ' ಎಂದು ಬರೆದಿದ್ದೀರಿ. ಶುಗರ್ ಕೇಳಿದರೆ ಇಲ್ಲ ಅಂತೀರಾ !

★★★

ಬಸ್ಯಾ: ದಯವಿಟ್ಟು 9 ಮತ್ತು 99 ರೂಪಾಯಿಯ ಹೊಸ ನೋಟುಗಳನ್ನು ಬಿಡುಗಡೆ ಮಾಡಿ
ರಿಸರ್ವ್ ಬ್ಯಾಂಕ್ ಅಧಿಕಾರಿ: ಯಾಕಪ್ಪಾ ?
ಬಸ್ಯಾ: ಪ್ರತಿ ಸಾರಿ ಅಂಗಡಿಗಳಿಗೆ ಹೋದಾಗೆಲ್ಲ ಚಿಲ್ಲರೆ ಬದಲಾಗಿ ಚಾಕೊಲೇಟ್ ಹಾಗೂ ಸ್ಟ್ರೆಪ್ಸಿಲ್ಸ್ ಕೊಡುತ್ತಾರೆ. ಅವುಗಳನ್ನು ತಿಂದು ತಿಂದು ಸಾಕಾಗಿದೆ!

★★★

ಮಹಿಳೆ: ಇನ್‌ಸ್ಪೆಕ್ಟರ್ ಸಾಹೇಬರೇ, ನನ್ನ ಪತಿ ಯಾವಾಗ ಸಿಗುತ್ತಾರೆ? ಅವರ ಸುದ್ದಿಯಿಲ್ಲದೆ ಇಂದಿಗೆ ನಾಲ್ಕು ದಿನಗಳಾದವು.
ಇನ್‌ಸ್ಪೆಕ್ಟರ್: ಸಿಗುತ್ತಾರೆ, ಬೇಗ ಸಿಗುತ್ತಾರೆ.
ಮಹಿಳೆ: ಏನಾದರೂ ಸುಳಿವು ಸಿಕ್ಕಿತೆ?
ಇನ್‌ಸ್ಪೆಕ್ಟರ್: ನಿನ್ನೆಯಷ್ಟೇ ಅವರ ಕಾಲಿನ ಸಾಕ್ಸ್ ಹೆದ್ದಾರಿ ಪಕ್ಕದಲ್ಲಿ ಸಿಕ್ಕಿದೆ. ಅದನ್ನು ಶ್ವಾನದಳದ ಟಾಮಿಗೆ ಆಘ್ರಾಣಿಸಿದ್ದರಿಂದ ಅದು ಮೂರ್ಛೆ ಹೋಗಿದೆ. ಅದಕ್ಕೆ ಪ್ರಜ್ಞೆ ಬಂದ ತಕ್ಷಣ ಶೋಧಕಾರ್ಯ ಆರಂಭಿಸುತ್ತೇವೆ.

★★★

ಪತ್ನಿ: ಓರ್ವ ರಾಕ್ಷಸನ ಜೊತೆ ನನ್ನ ಮದುವೆಯಾಗಿದ್ದರೂ ನಿಮ್ಮನ್ನು ಮದುವೆಯಾಗಿ ಪಡುತ್ತಿರುವಷ್ಟು ದುಃಖ ನಾನು ಅನುಭವಿಸುತ್ತಿರಲಿಲ್ಲ
ಪತಿ: ರಕ್ತ ಸಂಬಂಧದಲ್ಲಿ ಮದುವೆಯಾಗುವಂತಿಲ್ಲ ಮಾರಾಯ್ತಿ!

★★★

ಮೇಡಂ: ಸೆಮಿಸ್ಟರ್ ಪದ್ಧತಿಯಿಂದ ಏನು ಪ್ರಯೋಜನವಿದೆ ಹೇಳಿ.
ಗುಂಡ: ಪ್ರಯೋಜನ ಏನೆಂದು ತಿಳಿದಿಲ್ಲ ಮೇಡಂ, ಆದರೆ ಈಗ ವರ್ಷಕ್ಕೆ ಎರಡು ಬಾರಿ ಅಪ್ಪ–ಅಮ್ಮ ಮಾನ ಹರಾಜು ಹಾಕುತ್ತಿದ್ದಾರೆ!

■ (ಸಂಗ್ರಹ) **ರಮಣ ಶೆಟ್ಟಿ ರೆಂಜಾಳ್**

